ಶ್ರೀ ಕಾಗೋಡು ತಿಮ್ಮಪ್ಪ : ರೈತರು ಹಣ ಕೊಡುವುದಕ್ಕೆ ತಯಾರಿದ್ದಾರೆ, ಮುಂಗಡವಾಗಿ ವಸೂಲು ಮಾಡಿಕೊಳ್ಳಿ. ವಾಟರ್ ರೇಟ್‌ನಲ್ಲಿ ಡಿಡಕ್ಟ್ ಮಾಡುವುದಕ್ಕೆ ನಿಮ್ಮ ಗವರ್ನಮೆಂಟ್ ಜಿಒ ಮಾಡಿ. ಅಲ್ಲಿ ಕಲೆಕ್ಟ್ ಮಾಡಿಕೊಳ್ಳಿ.

ಶ್ರೀ ಕೆ.ಎನ್. ನಾಗೇಗೌಡ : ಅವರ ಸಲಹೆ ಬಹಳ ಸೂಕ್ತವಾಗಿದೆ, ಅವರ ಸಲಹೆಯನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ರೈತರು ಅವರೇ ಬಂದು ನೀರಾವರಿ ಬಾಂಡ್ ತೆಗೆದುಕೊಳ್ಳುವ ಪರಿಸ್ಥಿತಿ ಬಂದರೆ ಸರ್ಕಾರಕ್ಕೆ ಅದಕ್ಕಿಂತ ಸಂತೋಷವಾದ ವಿಚಾರ ಸರ್ಕಾರಕ್ಕಾಗಲಿ, ಸಮಾಜಕ್ಕಾಗಲಿ ಬೇರೆ ಇಲ್ಲ. ಆದ್ದರಿಂದ ರೈತರಿಂದ ನೀರಾವರಿ ಬಾಂಡ್‌ಗಳನ್ನು ಅತ್ಯಂತ ಆದರದಿಂದ ಸ್ವೀಕಾರ ಮಾಡಿ ಅವರಿಗೆ ಬಡ್ಡಿಯನ್ನೂ ಕೊಡುತ್ತೇವೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಶಿಗ್ಗಾವಿ ಮತ್ತು ಸವಣೂರು ತಾಲ್ಲೂಕುಗಳಿಗೆ ತುಂಗಾ ಮೇಲ್ದಂಡೆ ಯೋಜನೆಯಡಿಯಲ್ಲಿ ನೀರನ್ನು ಒದಗಿಸಲು ಸಾಧ್ಯವಾಗುವುದಿಲ್ಲವೆಂದು ಮಂತ್ರಿಗಳು ಹೇಳುತ್ತಿದ್ದಾರೆ, ಇದನ್ನು ವಿರೋಧಿಸಿ ನಾನು ವಾಕ್ ಔಟ್ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ಮಂಜೂನಾಥ ಸಿ. ಕುನ್ನೂರ್ ರವರು ಸದನದಿಂದ ನಿರ್ಗಮಿಸಿದರು)

## ವಿರೋಧ ಪಕ್ಷದ ನಾಯಕರ ಆಪ್ತ ಶಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಬಗ್ಗೆ ಸ್ಪಷ್ಟೀಕರಣ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉಪಾಧ್ಯಕ್ಷರೆ, ನಾನು ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕಿಂತ ಮುಂಚೆ ನಿನ್ನೆ ಮುಖ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಯವರು ಸದನದಲ್ಲಿ ಇರಲಿಲ್ಲ, ದೆಹಲಿಗೆ ಹೋಗಿದ್ದರು. ಚರ್ಚೆ ಮುಗಿದ ಮೇಲೆ ನಾನು ಅವರ ಉತ್ತರವನ್ನು ಫೋನ್ ನಲ್ಲಿ ಮಾತನಾಡಿದೆ, ಚರ್ಚೆಗೆ ಬಂದಂತಹ ವಿಷಯವನ್ನು ಅವರ ಹತ್ತಿರ ಪ್ರಸ್ತಾಪ ಮಾಡಿದಾಗ ಒಂದು ವಿಷಯವನ್ನು ನಾನು ಈ ಸದನಕ್ಕೆ ತಿಳಿಸಬೇಕಾಗುತ್ತದೆ, ಯಾವಾಗಲೂ ಕಡತದಲ್ಲಿ ಅದು ತಪ್ಪು ಕಲ್ಪನೆ ಆಗಬಾರದು ಎನ್ನುವುದಕ್ಕೋಸ್ಕರ ನಾನು ಈ ಮಾತನ್ನು ಹೇಳುವುದಕ್ಕೆ ಇಷ್ಟು ಪಡುತ್ತೇನೆ. ವಿರೋಧ ಪಕ್ಷದ ನಾಯಕರು ಮಾತನಾಡುವ ಸಂದರ್ಭದಲ್ಲಿ ಅವರು ಏನು ಅಭಿಪ್ರಾಯ ಪಟ್ಟರು ಎಂದರೆ, ಹಿಂದೆ ಇದ್ದಂತಹ ದೇವರಾಜ ಅರಸ್‌ರವರ ಕಾಲದಲ್ಲಿ ಯಾರೇ ಮಂತ್ರಿಗಳಾಗಲಿ, ಮುಖ್ಯ ಮಂತ್ರಿಗಳಾಗಲಿ, ಅವರವರ ಜಾತಿಗೆ ಸೇರಿದ ಪ್ರೈವೇಟ್ ಸೆಕ್ರೆಟರಿಗಳಾಗಿ, ಸೆಕ್ರೆಟರಿಗಳಾಗಿ, ಸಿಬ್ಬಂದಿಗಳಾಗಿ ಹೆಚ್ಚು ಇರಲೇಬಾರದು ಎಂದು ಒಂದು ನಿರ್ದೇಶನ ಕೊಟ್ಟಿದ್ದರು. ಆ ರೀತಿಯಾಗಿ ನಮ್ಮ ಸರ್ಕಾರಗಳು ಇದ್ದಂತಹ ಸಂದರ್ಭದಲ್ಲಿ ಪಾಲನೆ ಮಾಡಿಕೊಂಡು ಬಂದರು. ಈಗ ಅದನ್ನು ಪಾಲನೆ ಮಾಡಲಿಲ್ಲ ಆದ್ದರಿಂದ ತಪ್ಪು ಕಲ್ಪನೆಗೆ ಅವಕಾಶವಾಗುತ್ತದೆ ಎನ್ನತಕ್ಕಂತಹ ಅಭಿಪ್ರಾಯವನ್ನು ಹೊಂದಿ ವಿರೋಧ ಪಕ್ಷದ ನಾಯಕರು ಆ ಮಾತನ್ನು ಹೇಳಿದರು. ಮುಖ್ಯಮಂತ್ರಿಗಳಾಗಿದ್ದಂಥವರು ಆ ಸಂದರ್ಭದಲ್ಲಿ ಆ ಮಾತನ್ನು ಚರ್ಚೆ ಮಾಡಿದ್ದರೆ ಅಥವಾ ಒಪ್ಪದೇ ಇದ್ದಿದ್ದರೆ ಅಲ್ಲಿಗೆ ಕ್ಲಾರಿಫೈ ಆಗುತ್ತಿತ್ತು. ನಿನ್ನೆ

ಮಾತನಾಡುವಾಗ ಮತ್ತೊಂದು ವಿಷಯ ಖರ್ಗೆಯವರು ಏನು ಹೇಳಿದರೆಂದರೆ ವೈಸ್ ಛಾನ್ಸಲರ್ ಮೂರು ನಾಲ್ಕು ಜನ ಮಾಡುವ ಸಂದರ್ಭದಲ್ಲಿ ಒಬ್ಬರೂ ಕೂಡ ಇವತ್ತು ಪರಿಶಿಷ್ಟ ಜಾತಿಗೆ ಸಂಬಂಧಪಟ್ಟವರು ಆಗಿಲಿಲ್ಲ ಎನ್ನತಕ್ಕಂತಹ ಮಾತು, ಮನಸ್ಸಿನ ನೋವನ್ನು ಹೇಳಿದಾಗ ಅದನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ. ಮುಖ್ಯಮಂತ್ರಿಗಳು ನಿನ್ನೆ ಉತ್ತರ ಕೊಡುವ ಸಂದರ್ಭದಲ್ಲಿ ನಾನೂ ಕೂಡ ಇದ್ದೆ. ಆದರೆ ಅವರು ಏನು ಅಭಿಪ್ರಾಯ ಪಟ್ಟರು ಎಂದರೆ, ಒಂದು ಮಾತನ್ನು ಹೇಳುತ್ತಾ, ವಿರೋಧ ಪಕ್ಷದ ನಾಯಕರ ಆಫೀಸ್‌ನಲ್ಲಿರ -ತಕ್ಕಂತಹ ಸಿಬ್ಬಂದಿಗಳು ಹೆಚ್ಚು ಜನ ಪರಿಶಿಷ್ಟ ಜಾತಿಗೆ ಸೇರಿರತಕ್ಕಂತಹವರು, ಪರಿಶಿಷ್ಟ ಪಂಗಡಕ್ಕೆ ಸೇರಿದವರು ಎನ್ನುವಂತಹ ಕಲ್ಪನೆ ಬರುವ ರೀತಿಯಲ್ಲಿ ಮಾತನಾಡಿದರು. ಮಾತನಾಡಬೇಕಾದರೆ ಇದ್ದ ಮುಖ್ಯಮಂತ್ರಿಗಳ ಧಾಟಿ ಎಲ್ಲರಿಗೂ ಗೊತ್ತು. ಅವರು ಮಾತನಾಡತಕ್ಕಂತಹ ವ್ಯಂಗ್ಯದ ಧಾಟಿ ಇವತ್ತು ತಪ್ಪು ಕಲ್ಪನೆ ಬರುವ ಹಾಗಿತ್ತು. ಅದಕ್ಕೋಸ್ಕರ ಆ ಮಾತನ್ನು ಹೇಳಬೇಕಾಗುತ್ತದೆ, ಇವತ್ತು ಶ್ರೀಮಾನ್ ಖರ್ಗೆಯವರ ಆಫೀಸ್‌ನಲ್ಲಿರತಕ್ಕಂತಹವರಲ್ಲಿ ಆಪ್ತ ಕಾರ್ಯದರ್ಶಿಯಾಗಿರುವವರು ಒಬ್ಬರು ಬ್ರಾಹ್ಮಣರು ಇದ್ದಾರೆ, ಒಬ್ಬರು ಮುಸ್ಲಿಂ ಇದ್ದಾರೆ, ಇಬ್ಬರು ಕುರುಬರು ಇದ್ದಾರೆ, ಒಬ್ಬರು ಕ್ರಿಶ್ಚಿಯನ್ ರಿದ್ದಾರೆ, ಇಬ್ಬರು ಒಕ್ಕಲಿಗರಿದ್ದಾರೆ, ಪರಿಶಿಷ್ಟ ಜಾತಿಗೆ ಸೇರಿದಂತಹವರು ಒಬ್ಬರೇ ಒಬ್ಬರು ಸ್ಪೆಷಲ್ ಆಫೀಸರ್, ಇನ್ನೊಬ್ಬರು ಬಂಜಾರ ಕಮ್ಯೂನಿಟಿಗೆ ಸೇರಿದಂತಹವರು ಒಬ್ಬರು ಇದ್ದಾರೆ. ನಿನ್ನೆ ಏನು ಹೇಳಿದರೆಂದರೆ ಐದು ಜನರು ಎಸ್.ಸಿ.ಗೆ ಸೇರಿದಂಥವರು ಇದ್ದಾರೆಂದು ಅವರು ಜಾತಿವಾದಿಗಳೆನ್ನುವಂತಹ ರೀತಿಯಲ್ಲಿ ಕಂಪೇರ್ ಮಾಡುವಂತಹ ಅರ್ಥದಲ್ಲಿ ಹೇಳಿದರು. ಅದಕ್ಕೋಸ್ಕರ ಅದು ಕಡತದಲ್ಲಿ ಹೋಗಬಾರದೆನ್ನವ ದೃಷ್ಟಿಯಲ್ಲಿ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರಿಗೂ ಅವರು ಜಾತಿವಾದವನ್ನು ಮಾಡುತ್ತಿದ್ದಾರೆನ್ನುವಂತಹ ಉದ್ದೇಶವಿರಬಾರದು. ಆದುದರಿಂದ ಆ ಕಡತವನ್ನು ಸರಿಪಡಿಸಬೇಕೆನ್ನುವುದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಇವತ್ತು ಈ ಅಧಿವೇಶನವೂ ಮುಗಿಯುತ್ತಿದೆ, ಅದಕ್ಕೋಸ್ಕರ ಅವರ ಮಾತನ್ನು ಪ್ರತಿಬಿಂಬಿಸಬೇಕಾಗುತ್ತದೆ, ಅದಕ್ಕೋಸ್ಕರ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದು ಅದನ್ನು ಮಾನ್ಯ ವಿರೋಧಪಕ್ಷದ ನಾಯಕರು ಈ ರೀತಿಯಾಗಿ ಮಾತನಾಡಿದ್ದು ಸರಿಯಲ್ಲವೆನ್ನುವಂಥಾದ್ದು ಮತ್ತು ತಪ್ಪಾಭಿಪ್ರಾಯ ಉಂಟಾಗಬಾರದೆನ್ನುವಂಥಾದ್ದು. ನಾವು ಜಾತಿಗಳ ಕಾರಣಗಳಿಗಾಗಿ ರಾಜಕೀಯ ಪ್ರವೇಶ ಮಾಡುವಂಥಾದ್ದು ಅಲ್ಲವೆಂದು ಸ್ಪಷ್ಟಪಡಿಸಿದ್ದಾರೆಯೇ ವಿನಹ ಅನುಸಂಗಿಕವಾಗಿ ತಮ್ಮ ಆಪ್ತಕಾರ್ಯಾಲಯದಲ್ಲಿ ಮತ್ತು ವಿರೋಧಪಕ್ಷದವರ ಆಪ್ತ ಕಾರ್ಯಾಲಯದಲ್ಲಿ ಯಾರ್ಯಾರು ಇದ್ದಾರೆನ್ನುವಂತಹ ಮಾತನ್ನು ಹೇಳಿದರು. ಅದು ಬಹುಶಃ ತಪ್ಪು ಮಾಹಿತಿ ಲಭ್ಯವಾಗಿರಬಹುದು. ಒಂದು ವೇಳೆ ಜಾತಿ ವಾದಿಗಳಾಗಿರುವವರು ಬೇರೆ ಜಾತಿಯನ್ನು ಉಪಯೋಗಿಸಿಕೊಂಡು ಜಾತಿವಾದಿಯಾಗುವಂತಹ ಅವಕಾಶಗಳು ಬಹಳವಿರುತ್ತದೆ. ಆದುದರಿಂದ ಇವುಗಳನ್ನು ಬಹಳ ಸೂಕ್ಷ್ಮವಾಗಿ ನಿವಾರಣೆ ಮಾಡುವಂಥಾದ್ದು ಇರುತ್ತವೆ. ಆದುದರಿಂದ ಇಲ್ಲಿ ಬೇರೆ ಬೇರೆ ಅನ್ಯ ಜಾತಿಯವರನ್ನು ಆಪ್ತ ಕಾರ್ಯಾಲಯದಲ್ಲಿಟ್ಟಿಕೊಂಡಿದ್ದಾರೆನ್ನುವ ಕಾರಣದಿಂದಲೇ

ಅವರು ಬಹಳ ಜಾತ್ಯಾತೀತವಾಗಿ ವಿಜೃಂಭಿಸುತ್ತಾರೆಂದೂ ಕೂಡ ಹೇಳುವುದಕ್ಕಾಗುವುದಿಲ್ಲ. ಈ ಸಭೆಯ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ ವ್ಯಂಗ್ಯವಿರಲಿಲ್ಲ. ಅವರ ಮಾತಿನಲ್ಲಿ ಯಾವಾಗಲೂ ಹರಿತವಿರುತ್ತದೆ. ಅದನ್ನು ತಾವೂ ಕೂಡ ಗಮನಿಸಿದ್ದೀರಿ. ಇಲ್ಲಿ ವಿರೋಧಪಕ್ಷದ ನಾಯಕರು ಬೇರೆ ಅಭಿಪ್ರಾಯದಲ್ಲಿ ಚಿತ್ರಿಸಿಕೊಳ್ಳುವಂತಹ ಪ್ರಯತ್ನವನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಿಲ್ಲ. ತಮಗೆ ಅದು ಕಡತದಲ್ಲಿ ಮಾಹಿತಿ ಬೇಕಾಗಿದೆ ಎನ್ನುವಂತಹ ಮಟ್ಟಕ್ಕೆ ಆಗಿದ್ದರೆ ಅದು ಕಡತದಲ್ಲಿ ಹೋಗಲಿ. ಆದರೆ ಯಾರು ಜಾತಿ ವಾದಿಗಳು ಯಾರು ಅಲ್ಲವೆನ್ನುವಂಥಾದ್ದು ಅವರ ನಡವಳಿಕೆಯ ಮೂಲಕ ಸಮಾಜ ನಿರ್ಣಯ ಮಾಡುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ನಾನು ಕೇಳುವಂತಹ ವಿಷಯ ಬೇರೆ.

ಉಪಾಧ್ಯಕ್ಷರು : ಈಗ ಅದರ ಬಗ್ಗೆ ಚರ್ಚೆ ಬೇಡ, ಈಗ ಅದರ ಬಗ್ಗೆ ಕ್ಲಾರಿಫಿಕೇಷನ್ ಆಗಿದೆ, ಈಗ ಮತ್ತೆ ಚರ್ಚೆ ಏಕೆ ಬೇಕು? ಅದಕ್ಕೆ ಉತ್ತರವನ್ನು ಹೇಳಿದ್ದಾರೆ, ಈ ವಿಷಯ ಇಲ್ಲಿಗೆ ಮುಗಿಯಿತು. ಇವತ್ತು ಅಧಿವೇಶನದ ಕೊನೆಯ ದಿವಸವಾಗಿದೆ. ನಾವು ಎಲ್ಲಾ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ತಾವು ದಯಮಾಡಿ ಸಹಕರಿಸಬೇಕು.

## ಮಂಡ್ಯ ಜಿಲ್ಲೆಯ ಸಕ್ಕರೆ ಕಾರ್ಖಾನೆಗಳವರು ರೈತರಿಗೆ ಕಬ್ಬಿನ ಬಾಕಿಯನ್ನು ಪಾವತಿ ಮಾಡದೇ ಇರುವುದು

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಕ್ಕರೆ ಮಂತ್ರಿಗಳು ಹಾಗೂ ಮಂಡ್ಯ ಉಸ್ತುವಾರಿ ಮಂತ್ರಿಗಳು ದಯಮಾಡಿ ಗಮನಿಸಬೇಕು. ಪ್ರತಿ ವರ್ಷ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಯಾವಾಗಲೂ ಪ್ರಾಸಂಗಿಕವಾಗಿ ಕರ್ನಾಟಕದ ಎಲ್ಲಾ ಸಕ್ಕರೆ ಕಾರ್ಖಾನೆಯವರನ್ನು ಕರೆದು ಸಭೆಯನ್ನು ನಡೆಸಲಾಗುತ್ತಿತ್ತು. ಆ ಸಭೆಯಲ್ಲಿ ಸಕ್ಕರೆ ಕಾರ್ಖಾನೆಯ ಪರಿಸ್ಥಿತಿಯ ಬಗ್ಗೆ ಯಾವುದು ನಷ್ಟದಲ್ಲಿದೆ, ಯಾವುದು ಲಾಭದಲ್ಲಿದೆ ಎನ್ನುವ ವಿಚಾರಗಳನ್ನೆಲ್ಲಾ ಚರ್ಚೆ ಮಾಡಲಾಗುತ್ತಿತ್ತು. ಅದು ಜೂನ್, ಜುಲೈನಲ್ಲಿ ಒಂದು ಬ್ಯಾಚ್‌ನಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭವಾಗುತ್ತಿತ್ತು. ಅಕ್ಟೋಬರ್, ನವೆಂಬರ್‌ನಲ್ಲಿ, ಡಿಸೆಂಬರ್‌ನಲ್ಲಿ ಕೆಲವು ಕಾರ್ಖಾನೆಗಳು ಶುರುವಾಗುತ್ತಿತ್ತು. ಜನವರಿ, ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ಕೆಲವು ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗುತ್ತಿತ್ತು. ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳಷ್ಟು ಕಬ್ಬನ್ನು ಅರೆಯುವಂತಹ ಸಾಮರ್ಥ್ಯವಿರುವಂತಹ ಕೆಲವು ಖಾಸಗಿ ಕಾರ್ಖಾನೆಗಳು ಪೂರ್ಣ ಪ್ರಮಾಣದಲ್ಲಿ ಬಾಗಿಲು ಹಾಕಿವೆ. ಈ ರೀತಿಯಾಗಿ ನಾಲ್ಕು ಕಾರ್ಖಾನೆಗಳು ಬಾಗಿಲು ಹಾಕಿವೆ. ಈಗಾಗಲೇ ಎರಡು ವರ್ಷಗಳಿಂದ ಹೆಚ್ಚುವರಿ ಕಬ್ಬಿನಿಂದ ನಷ್ಟವನ್ನು ಅನುಭವಿಸುತ್ತಿರುವಂತಹ ರೈತರು ಇದ್ದಾರೆ ಯಾವ್ಯಾವ ಕಾರ್ಖಾನೆಗಳಲ್ಲಿ ಎಕ್ಸಸ್ ಇದೆ, ಯಾವ್ಯಾವ ಕಾರ್ಖಾನೆಗಳಲ್ಲಿ ಕಡಿಮೆ ಇದೆ, ಅದನ್ನು ಯಾವ ರೀತಿಯಾಗಿ ಡೈವರ್ಟ್ ಮಾಡಬೇಕು, ಮತ್ತೆ ಈಗ ಕಾರ್ಖಾನೆಗಳನ್ನು ಶುರು ಮಾಡಿರುವಂಥಾದ್ದಕ್ಕೆ ಬೆಲೆಯನ್ನು ಯಾವ ರೀತಿಯಾಗಿ ನಿಗದಿ ಮಾಡಬೇಕು. ಇದರ ಬಗ್ಗೆ ಸುಮಾರು ಸಲ ಹೇಳಿದ್ದೇನೆ. ತಾವು ಪ್ರತಿ ವರ್ಷ ತಮ್ಮ ನಿಯಮಾವಳಿಯ ಪ್ರಕಾರ ಕೆಲಸ ಮಾಡದಿದ್ದರೆ ಕಬ್ಬು ಬೆಳೆಯುವಂತಹ ರೈತರಿಗೆ ಕೊನೆಯಲ್ಲಿ ಬಹಳ ಕಷ್ಟವಾಗುವಂತಹ ಪರಿಸ್ಥಿತಿ